ಕರ್ನಾಟಕ ಸರ್ಕಾರ

**ಕಾಲೇಜು ಶಿಕ್ಷಣ ಇಲಾಖೆ**

ದೂ: 080-22343985

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಶೇಷಾದ್ರಿ ರಸ್ತೆ, ಬೆಂಗಳೂರು,
ದಿನಾಂಕ:07.08.2018.

ಸಂಖ್ಯೆ: ಕಾಶಿಇ:ಶೈವಿ:48:ಸ್ಕೌಟ್ಸ್ & ಗೈಡ್ಸ್/2018-19

# ಅಧಿಕೃತ ಜ್ಞಾಪನ

ವಿಷಯ: ರೇಂಜರ್ಸ್ / ರೋವರ್ ಸ್ಕೌಟ್ಸ್ ಲೀಡರ್ಸ್‌ಗಳಿಗೆ ರಾಜ್ಯ ಮಟ್ಟದ ಮೂಲ ತರಬೇತಿ ಶಿಬಿರಕ್ಕೆ ಶಿಬಿರಾರ್ಥಿಗಳನ್ನು ನಿಯೋಜಿಸುವ ಬಗ್ಗೆ.

ಉಲ್ಲೇಖ: ರಾಜ್ಯ ಕಾರ್ಯದರ್ಶಿಗಳು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ರವರ ಪತ್ರ ಸಂಖ್ಯೆ:BSG/SHQ/1181/2018-19 dt:04.08.2018.

********

ರಾಜ್ಯದ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಹಾಗೂ ಖಾಸಗಿ ಅನುದಾನಿತ ಕಾಲೇಜುಗಳಲ್ಲಿ ಕಡ್ಡಾಯವಾಗಿ ಭಾರತ್ ಸ್ಕೌಟ್ಸ್ & ಗೈಡ್ಸ್ ಘಟಕಗಳನ್ನು ಸ್ಥಾಪಿಸಿ ನಿರ್ವಹಿಸುವುದು ಕಡ್ಡಾಯವಾಗಿರುತ್ತದೆ ಹಾಗೂ ಈ ಘಟಕಗಳನ್ನು ನಿರ್ವಹಿಸಲು ತರಬೇತಿ ಪಡೆದ ಅಧ್ಯಾಪಕರುಗಳಿಗೆ ಜವಾಬ್ದಾರಿ ನೀಡಬೇಕಾಗಿರುತ್ತದೆ. ಈ ನಿಟ್ಟಿನಲ್ಲಿ ಭಾರತ್ ಸ್ಕೌಟ್ಸ್ & ಗೈಡ್ಸ್, ಕರ್ನಾಟಕ ವತಿಯಿಂದ ದಿನಾಂಕ: 17.08.2018 ರಿಂದ 23.08.2018 ರವರೆಗೆ ಡಾ.ವಿ ಎಸ್ ಆಚಾರ್ಯ ಸ್ಕೌಟ್ಸ್ / ಗೈಡ್ಸ್ ಜಿಲ್ಲಾ ತರಬೇತಿ ಕೇಂದ್ರ, ಪ್ರಗತಿನಗರ,ಅಲೆಯೂರು, ಉಡುಪಿ, ಇಲ್ಲಿ ಆಯೋಜಿಸಿರುವ ರಾಜ್ಯಮಟ್ಟದ ರೇಂಜರ್ / ರೋವರ್ ಸ್ಕೌಟ್ಸ್ ಲೀಡರ್ಸ್‌ಗಳ ಮೂಲ ತರಬೇತಿಗೆ ಅರ್ಹರಿರುವ ಸರ್ಕಾರಿ / ಖಾಸಗಿ ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳ ಅಧ್ಯಾಪಕರುಗಳನ್ನು ಸದರಿ ತರಬೇತಿಗೆ ಹಾಜರಾಗಲು ಸೂಚಿಸಲಾಗಿದೆ ಹಾಗೂ ಸದರಿ ಅವಧಿಗೆ ಅನ್ಯಕಾರ್ಯನಿಮಿತ್ತ ರಜೆಯನ್ನು ಮಂಜೂರು ಮಾಡಲಾಗಿದೆ.

ಅಡಕ: **ಹೆಚ್ಚಿನ ವಿವರಗಳಿಗೆ ಭಾರತ್ ಸ್ಕೌಟ್ಸ್ & ಗೈಡ್ಸ್, ಕರ್ನಾಟಕ** ರವರ ಪತ್ರ ಲಗತ್ತಿಸಿದೆ.

**ಕಾಲೇಜು ಶಿಕ್ಷಣ ನಿರ್ದೇಶಕರು**

ಇವರಿಗೆ:

1. ಸಂಬಂಧಪಟ್ಟ ಕಾಲೇಜುಗಳ ಪ್ರಾಂಶುಪಾಲರುಗಳಿಗೆ - ಸದರಿ ತರಬೇತಿಗೆ ಆಯ್ಕೆಯಾಗಿರುವ ಅಧ್ಯಾಪಕರುಗಳನ್ನು ಕಡ್ಡಾಯವಾಗಿ ತರಬೇತಿಯ ಹಿಂದಿನ ದಿನವೇ ಬಿಡುಗಡೆಗೊಳಿಸುವಂತೆ ಸೂಚಿಸಲಾಗಿದೆ.
2. ಮಾಹಿತಿ ತಂತ್ರಜ್ಞಾನ ಅಧಿಕಾರಿಗಳು, ಕೇಂದ್ರ ಕಛೇರಿ, ಬೆಂಗಳೂರು – ಇಲಾಖಾ ವೆಬ್‌ಸೈಟ್‌ನಲ್ಲಿ ಅಳವಡಿಸಲು ತಿಳಿಸಲಾಗಿದೆ.

ಪ್ರತಿಯನ್ನು:

1. ಜಂಟಿ ನಿರ್ದೇಶಕರು, ಪ್ರಾದೇಶಿಕ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಧಾರವಾಡ, ಕಲಬುರಗಿ.
2. ರಾಜ್ಯ ಕಾರ್ಯದರ್ಶಿಗಳು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ರಾಜ್ಯ ಕೇಂದ್ರ ಕಾರ್ಯಾಲಯ, # 39, ಶಾಂತಿಗೃಹ, ಅರಮನೆ ರಸ್ತೆ, ಬೆಂಗಳೂರು – 560 001.
3. ಆಯುಕ್ತರು, ನಿರ್ದೇಶಕರು, ಹೆಚ್ಚುವರಿ ನಿರ್ದೇಶಕರು, ಮುಖ್ಯಾಡಳಿತಾಧಿಕಾರಿಗಳು, ಜಂಟಿ ನಿರ್ದೇಶಕರ ಆಪ್ತಶಾಖೆಗೆ, ಕೇಂದ್ರ ಕಛೇರಿ, ಬೆಂಗಳೂರು.
4. ಶ್ರೀ ಆರ್.ಶ್ರೀಕಾಂತ್, ಸಮನ್ವಯಾಧಿಕಾರಿಗಳು, ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು.
5. ಕಛೇರಿ ಪ್ರತಿ.

ಕರ್ನಾಟಕ ಸರ್ಕಾರ

**ಕಾಲೇಜು ಶಿಕ್ಷಣ ಇಲಾಖೆ**

ದೂರವಾಣಿ: 080-22297760, 22297824,

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಶೇಷಾದ್ರಿ ರಸ್ತೆ, ಬೆಂಗಳೂರು-560001.

ಸಂಖ್ಯೆ:ಕಾಶಿಇ:ಶೈವಿ:48:ಸ್ಕೌಟ್ಸ್ & ಗೈಡ್ಸ್:2018-19

ದಿನಾಂಕ: 07.08.2018.

**ಅಧಿಕೃತ ಜ್ಞಾಪನ**

ವಿಷಯ: ಭಾರತ್ ಸ್ಕೌಟ್ಸ್ & ಗೈಡ್ಸ್ ತರಬೇತಿಗೆ ಅಧ್ಯಾಪಕರುಗಳನ್ನು ನಿಯೋಜಿಸುವ ಬಗ್ಗೆ.

ಉಲ್ಲೇಖ: ರಾಜ್ಯ ಕಾರ್ಯದರ್ಶಿ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ರವರ ಕಛೇರಿ ಪತ್ರ ಸಂಖ್ಯೆ: ಬಿಎಸ್‌ಜಿ/ಎಸ್‌ಹೆಚ್‌ಕ್ಯೂ/1191/2018-19 ದಿನಾಂಕ:06.08.2018.

******

ದಿ ಭಾರತ್ ಸ್ಕೌಟ್ಸ್ & ಗೈಡ್ಸ್, ಕರ್ನಾಟಕ, ರವರ ವತಿಯಿಂದ ದಿನಾಂಕ:17.08.2018 ರಿಂದ 23.08.2018 ರವರೆಗೆ ಡಾ.ವಿ ಎಸ್ ಆಚಾರ್ಯ ಸ್ಕೌಟ್ಸ್ / ಗೈಡ್ಸ್ ಜಿಲ್ಲಾ ತರಬೇತಿ ಕೇಂದ್ರ, ಪ್ರಗತಿನಗರ, ಅಲೆಯೂರು, ಉಡುಪಿ, ಇಲ್ಲಿ ರೇಂಜರ್ / ರೋವರ್ ಸ್ಕೌಟ್ಸ್ ಲೀಡರ್ಸ್‌ಗಳಿಗೆ ರಾಜ್ಯ ಮಟ್ಟದ ಮೂಲ ತರಬೇತಿ ಶಿಬಿರವನ್ನು ಆಯೋಜಿಸಲಾಗಿದ್ದು, ಸದರಿ ತರಬೇತಿಗೆ ಅಧ್ಯಾಪಕರುಗಳನ್ನು ಆಯ್ಕೆ ಮಾಡಲಾಗಿದ್ದು, ನಿಯೋಜಿಸುವಂತೆ ಉಲ್ಲೇಖಿತ ಪತ್ರದಲ್ಲಿ ಕೋರಲಾಗಿರುತ್ತದೆ. ಈ ಸಂಬಂಧ, ಸದರಿ ತರಬೇತಿಯಲ್ಲಿ ಭಾಗವಹಿಸಲು ಕೆಳಕಂಡ ಅಧ್ಯಾಪಕರುಗಳಿಗೆ ಅನುಮತಿ ನೀಡಲಾಗಿದೆ ಹಾಗೂ ತರಬೇತಿಯಲ್ಲಿ ಭಾಗವಹಿಸಿದ ಬಗ್ಗೆ ಹಾಜರಾತಿ ಪ್ರಮಾಣ ಪತ್ರವನ್ನು ಒಪ್ಪಿಸುವ ನಿಬಂಧನೆಗೊಳಪಟ್ಟು ಪ್ರಯಾಣ ದಿನಗಳೂ ಸೇರಿದಂತೆ ಅನ್ಯಕಾರ್ಯನಿಮಿತ್ತ ರಜೆಯನ್ನು ಮಂಜೂರು ಮಾಡಲಾಗಿದೆ.

| ಕ್ರ.ಸಂ. | ಅಧ್ಯಾಪಕರ ಹೆಸರು<br>ಶ್ರೀ / ಶ್ರೀಮತಿ | ಕರ್ತವ್ಯ ನಿರ್ವಹಿಸುತ್ತಿರುವ ಕಾಲೇಜಿನ ಹೆಸರು |
|---|---|---|
| 1. | ಡಾ. ಸಂತೋಷ್ ಹುಗ್ಗಿ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶಹಪುರ, ಯಾದಗಿರಿ ಜಿಲ್ಲೆ |
| 2. | ರಾಜಕುಮಾರ್ ಎಸ್ ಆಲೂರೆ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬೀದರ್ |
| 3. | ದಿವ್ಯ | ವಿವೇಕಾನಂದ ಕಾಲೇಜು, ದಕ್ಷಿಣ ಕನ್ನಡ |
| 4. | ಶಾಂತಿ ಕುಮಾರಿ | ಮಹಾರಾಣಿ ವಿಜ್ಞಾನ ಕಾಲೇಜು, ಬೆಂಗಳೂರು |

**ಕಾಲೇಜು ಶಿಕ್ಷಣ ನಿರ್ದೇಶಕರು**

**ಇವರಿಗೆ:** -

1. ಸಂಬಂಧಿಸಿದ ಕಾಲೇಜುಗಳ ಪ್ರಾಂಶುಪಾಲರುಗಳಿಗೆ – ನಿಯೋಜಿತ ಅಧ್ಯಾಪಕರುಗಳನ್ನು ಕಡ್ಡಾಯವಾಗಿ ತರಬೇತಿಗೆ ಹಾಜರಾಗಲು ಸೂಚಿಸಿ ಕರ್ತವ್ಯದಿಂದ ಬಿಡುಗಡೆಗೊಳಿಸುವಂತೆ ಸೂಚಿಸಲಾಗಿದೆ
2. ಸಂಬಂಧಿಸಿದ ಅಧ್ಯಾಪಕರುಗಳಿಗೆ ( ಪ್ರಾಂಶುಪಾಲರ ಮುಖಾಂತರ).

**ಪ್ರತಿಯನ್ನು:**

1. ರಾಜ್ಯ ಕಾರ್ಯದರ್ಶಿಗಳು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ, ರಾಜ್ಯ ಕೇಂದ್ರ ಕಾರ್ಯಾಲಯ, # 39, ಶಾಂತಿಗೃಹ, ಅರಮನೆ ರಸ್ತೆ, ಬೆಂಗಳೂರು – 560 001.
2. ಶ್ರೀ ಶ್ರೀಕಾಂತ್, ಸಮನ್ವಯಾಧಿಕಾರಿಗಳು, ಕೇಂದ್ರ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು.
3. ಮಾಹಿತಿ ತಂತ್ರಜ್ಞಾನ ಅಧಿಕಾರಿಗಳು, ಕೇಂದ್ರ ಕಛೇರಿ, ಇಲಾಖಾ ವೆಬ್‌ಸೈಟ್‌ನಲ್ಲಿ ಅಳವಡಿಸಲು ತಿಳಿಸಲಾಗಿದೆ.
4. ಕಚೇರಿ ಪ್ರತಿ

# ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

ರಾಜ್ಯ ಕೇಂದ್ರ ಕಾರ್ಯಾಲಯ, #39, ಶಾಂತಿಗೃಹ, ಅರಮನೆ ರಸ್ತೆ, ಬೆಂಗಳೂರು – 560 001

ದೂ: (ಸ್ಕೌಟ್ ವಿಭಾಗ)+91-80-2226 0017; (ಗೈಡ್ ವಿಭಾಗ) +91-80-2226 7470; ಫ್ಯಾಕ್ಸ್: +91-80-2226 1047

ಮಿಂಚಂಚೆ: shq@bsgkarnataka.org / shantigruha@bsgkarnataka.org ಅಂತರ್ಜಾಲ: www.bsgkarnataka.org

ಸಂಖ್ಯೆ: ಬಿಎಸ್‌ಜಿ/ಎಸ್‌ಹೆಚ್‌ಕ್ಯೂ/1170 /2018-19 ದಿನಾಂಕ: 3.08.2018

ಆಯುಕ್ತರು
ಕಾಲೇಜು ಶಿಕ್ಷಣ ಇಲಾಖೆ
ಬೆಂಗಳೂರು

ಮಾನ್ಯರೆ,

ವಿಷಯ:- ರೋವರ್ಸ್ ಸ್ಕೌಟ್ಸ್ ಲೀಡರ್ಸ್‌ಗಳಿಗೆ ರಾಜ್ಯ ಮಟ್ಟದ ಮೂಲ ತರಬೇತಿ ಶಿಬಿರಕ್ಕೆ ಶಿಬಿರಾರ್ಥಿಗಳನ್ನು ನಿಯೋಜಿಸುವ ಕುರಿತ

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ರಾಜ್ಯ ಸಂಸ್ಥೆ, ಗೈಡ್ ವಿಭಾಗದಿಂದ ರಾಜ್ಯ ಮಟ್ಟದ ಫ್ಲಾಕ್ ಲೀಡರ್ಸ್‌ಗಳ ಮೂಲ ತರಬೇತಿ ಶಿಬಿರವನ್ನು ಆಯೋಜಿಸಲಾಗಿದೆ. ಶಿಬಿರದ ವಿವರಗಳು ಈ ಕೆಳಕಂಡಂತಿವೆ :

| | |
|---|---|
| ತರಬೇತಿ ಶಿಬಿರ | ರೋವರ್ಸ್ ಸ್ಕೌಟ್ಸ್ ಲೀಡರ್ಸ್‌ಗಳಿಗೆ ರಾಜ್ಯ ಮಟ್ಟದ ಮೂಲ ತರಬೇತಿ ಶಿಬಿರ |
| ಸ್ಥಳ | ಡಾ॥ ವಿ.ಎಸ್. ಆಚಾರ್ಯ ಸ್ಕೌಟ್ಸ್-ಗೈಡ್ಸ್ ಜಿಲ್ಲಾ ತರಬೇತಿ ಕೇಂದ್ರ, ಪ್ರಗತಿನಗರ, ಅಲೆಯೂರು, ಉಡುಪಿ ಜಿಲ್ಲೆ. |
| ದಿನಾಂಕ | 17.08.2018 ರಿಂದ 23.08.2018ರವರೆಗೆ |
| ಹಾಜರಾಗುವ ದಿನಾಂಕ | 17.08.2018 ಬೆಳಗ್ಗೆ 10.00 ಗಂಟೆಗೆ (ತಡವಾಗಿ ಬಂದವರನ್ನು ಸೇರಿಸಲಾಗುವುದಿಲ್ಲ). |
| ಬಿಡುಗಡೆ ದಿನಾಂಕ | 23.08.2018 ಸಂಜೆ 4 ಗಂಟೆಯ ಒಳಗೆ |
| ನೊಂದಾವಣಿ ಶುಲ್ಕ | ತಲಾ ರೂ.25/- |
| ದಳ ನೊಂದವಣಿ ಶುಲ್ಕ | ರೋವರ್ ಸ್ಕೌಟ್ ಘಟಕಕ್ಕೆ ವಾರ್ಷಿಕ ರೂ.194/- ಸ್ಕೌಟ್ ಮತ್ತು ಗೈಡ್ ಮಾಸಿಕ ವಾರ್ತಾ ಪತ್ರಿಕೆ ಚಂದಾದಾರರ ಶುಲ್ಕ ರೂ.100/- ಒಂದು ವರ್ಷಕ್ಕೆ. |
| ಯಾರು ಭಾಗವಹಿಸಬಹುದು | ಪದವಿಪೂರ್ವ ಮತ್ತು ಪ್ರಥಮದರ್ಜೆ ಕಾಲೇಜುಗಳ ಪುರುಷ ಉಪನ್ಯಾಸಕರು ಮತ್ತು ಜಿಲ್ಲಾ ಸಂಸ್ಥೆಯ ಶಿಫಾರಸ್ಸನ್ನು ಪಡೆದು 21 ವರ್ಷ ತುಂಬಿದ ಮುಕ್ತ ತಂಡದಿಂದ ಪುರುಷರು ಭಾಗವಹಿಸಬಹುದು. |
| ಸಮವಸ್ತ್ರ | ಸಮವಸ್ತ್ರಕ್ಕೆ (ಬೂದಿ ಬಣ್ಣದ ಅರ್ಥತೋಳಿನ ಬುಜಪಟ್ಟಿ, ಮುಚ್ಚಳವಿರುವ ಎರಡು ಜೇಬುಳ್ಳ ಷರ್ಟ್, ನೀಲಿ ಬಣ್ಣದ ಪ್ಯಾಂಟ್ (ಪೋಲಿಸರ ಸಮವಸ್ತ್ರದಂತೆ) ಸ್ಟ್ರಾಪ್, ಓಗಲ್, ಬ್ಲೂ ಬೆರೆಟ್ ಟೋಪಿ, ಕರಿ ಬಣ್ಣದ ಲೇಸ್ ಇರುವ ಷೂ, ಕರಿ ಬಣ್ಣದ ಕಾಲು ಚೀಲ). ಕಾಲೇಜುಗಳ ರೋವರ್ ರೇಂಜರ್ ನಿಧಿಯಿಂದ ರೂ.2000/- ಭರಿಸಬಹುದು. ಸಮವಸ್ತ್ರದ ವಿನ್ಯಾಸ ಮತ್ತು ದೊರೆಯುವ ಸ್ಥಳ ಮುಂತಾದ ವಿವರಗಳನ್ನು ನಿಮ್ಮ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಸಂಸ್ಥೆಯ ವತಿಯಿಂದ ಪಡೆಯಲು ಕೋರಿದೆ. ಹೆಚ್ಚಿನ ವಿವರಗಳಿಗೆ ಕಛೇರಿ ದೂರವಾಣಿ ಸಂಖ್ಯೆ :080-22267470 ಗೆ ಸಂಪರ್ಕಿಸಿರಿ. ಶಿಬಿರಕ್ಕೆ ಸಮವಸ್ತ್ರ ಕಡ್ಡಾಯವಾಗಿರಲೇಬೇಕು. |

..2

| | |
|---|---|
| ಪ್ರಯಾಣ ವೆಚ್ಚ | ಕಾಲೇಜಿನಿಂದ ಶಿಬಿರ ನಡೆಯುವ ಸ್ಥಳಕ್ಕೆ ಹೋಗಿ ಬರುವ ಪ್ರಯಾಣ ವೆಚ್ಚವನ್ನು ಕಾಲೇಜಿನ ರೋವರ್ ನಿಧಿಯಿಂದ ಭರಿಸುವುದು. (ಮುಕ್ತ ತಂಡದಿಂದ ಭಾಗವಹಿಸುವ ನಾಯಕರುಗಳು ರಾಜ್ಯ ಸಂಸ್ಥೆಗೆ ಮುಂಚಿತವಾಗಿಯೆ ಜಿಲ್ಲಾ ಸಂಸ್ಥೆಯ ಮುಖಾಂತರ ದಿನಾಂಕ 13.08.2018ರ ಒಳಗೆ ತಿಳಸುವುದು.) |
| ಊಟ ಮತ್ತು ವಸತಿ | ರಾಜ್ಯ ಸಂಸ್ಥೆ ವತಿಯಿಂದ ಊಟ ಮತ್ತು ವಸತಿ ಸೌಕರ್ಯವನ್ನು ಏರ್ಪಡಿಸಿದೆ. |
| ತರಬೇಕಾದ ವಸ್ತುಗಳು | ಸಮವಸ್ತ್ರ, ಬದಲಾಯಿಸಲು ಉಡುಪು, ಬೆಚ್ಚಗಿನ ಹಾಸಿಗೆ, ತಟ್ಟೆ, ಲೋಟ, ಲೇಖನ ಸಾಮಗ್ರಿಗಳು, ಮೂರು ಮೀಟರ್ ಕಾಟನ್ ಬಿಳಿಹಗ್ಗ, ಬರವಣಿಗೆಯ ಸಾಮಗ್ರಿಗಳು, ಸೂಜಿದಾರ, ವೈಯಕ್ತಿಕ ಔಷದಿ, ಶೇವಿಂಗ್ ಸೆಟ್, ಟಾಯ್‌ಲೇಟ್ ಕಿಟ್, ಛತ್ರಿ, ಟಾಚ್, ಮಸ್ಕಿಟೋ ಕಾಯಿಲ್ ಮತ್ತು ಇತರೆ ಶಿಬಿರಕ್ಕೆ ಬೇಕಾಗುವ ಹಾಗೂ ವೈಯಕ್ತಿಕ ವಸ್ತುಗಳು. |
| ನಿಗಧಿಪಡಿಸಿರುವ ಕೋಟಾ | ಎಲ್ಲಾ ಜಿಲ್ಲೆಗಳಿಂದ ಭಾಗವಹಿಸುವುದು. ಭಾಗವಹಿಸುವವರ ಸಂಖ್ಯೆಯನ್ನು ರಾಜ್ಯ/ಜಿಲ್ಲಾ ಸಂಸ್ಥೆ ತಿಳಸುವುದು |
| ಶಿಬಿರವನ್ನು ತಲುಪುವ ವಿಧಾನ | ಮಣಿಪಾಲ್ ಬಸ್ಸು ನಿಲ್ದಾಣ ದಿಂದ ಪ್ರಗತಿನಗರಕ್ಕೆ ಸಿಟಿ ಬಸ್ ಸೌಲಭ್ಯವಿರುತ್ತದೆ ಮತ್ತು ರೈಲಿನಿಂದ ಬರುವವರು ಉಡುಪಿ ರೈಲ್ವೆ ನಿಲ್ದಾಣದಿಂದ ಪ್ರಗತಿನಗರವು 7 ಕಿ.ಮೀ ಇರುತ್ತದೆ. ಅಲ್ಲಿಂದ ಆಟೋದಿಂದ ತರಬೇತಿ ಶಿಬಿರವನ್ನು ತಲುಪುವುದು. |
| ನೊಂದಾಯಿಸಲು ಕಡೆ ದಿನಾಂಕ | 13-08-2018 |
| ಸಂಪರ್ಕಿಸಬೇಕಾದ ಸಂಖ್ಯೆ | ಶ್ರೀ. ಎ.ಎಂ. ಶಂಕರ್, ರಾಜ್ಯ ತರಬೇತಿ ಆಯುಕ್ತರು(ಸ್ಕೌ): 9972214329<br>ಶ್ರೀಮತಿ. ಕೆ.ವಿ. ಶಾಮಲ, ರಾಜ್ಯ ತರಬೇತಿ ಆಯುಕ್ತರು(ಗೈ):9980237570<br>ಶ್ರೀ. ನಿತಿನ್ ಅಮಿನ್, ಜಿಲ್ಲಾ ಸಂಘಟಕರು :9916817961<br>ಶ್ರೀಮತಿ ಸುಮನ್ ಶೇಖರ್, ಜಿಲ್ಲಾ ಸಂಘಟಕರು :9844994576 |

ಶಿಬಿರ ನೊಂದಣಿ ಶುಲ್ಕ, ದಳ ನೋಂದಣಿ ಶುಲ್ಕ ಮತ್ತು ಸ್ಕೌಟ್ ಗೈಡ್ ಮಾಸ ಪತ್ರಿಕೆ ವಾರ್ಷಿಕ ಚಂದಾಹಣವನ್ನು ಆಯಾ ಕಾಲೇಜಿನ ರೋವರ್ ಮತ್ತು ರೇಂಜರ್ ನಿಧಿಯಿಂದ, ಸರ್ಕಾರಿ ಆದೇಶದಂತೆ ಭರಿಸಲು ಅವಕಾಶವಿರುತ್ತದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

ಚಿನ್ನಸ್ವಾಮಿ ರೆಡ್ಡಿ

ರಾಜ್ಯ ಕಾರ್ಯದರ್ಶಿ

# ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

ರಾಜ್ಯ ಕೇಂದ್ರ ಕಾರ್ಯಾಲಯ, #39, ಶಾಂತಿಗೃಹ, ಅರಮನೆ ರಸ್ತೆ, ಬೆಂಗಳೂರು – 560 001

ದೂ: (ಸ್ಕೌಟ್ ವಿಭಾಗ)+91-80-2226 0017; (ಗೈಡ್ ವಿಭಾಗ) +91-80-2226 7470; ಫ್ಯಾಕ್ಸ್ +91-80-2226 1047

ಮಿಂಚಂಚೆ: shq@bsgkarnataka.org / shantigruha@bsgkarnataka.orgಅಂತರ್ಜಾಲ: www.bsgkarnataka.org


ಸಂಖ್ಯೆ:ಬಿಎಸ್‌ಜಿ/ಎಸ್‌ಹೆಚ್‌ಕ್ಯೂ/ 1171 /2018-19 ದಿನಾಂಕ: 3.08.2018

ಆಯುಕ್ತರು
ಕಾಲೇಜು ಶಿಕ್ಷಣ ಇಲಾಖೆ
ಬೆಂಗಳೂರು

ಮಾನ್ಯರೆ,

ವಿಷಯ:– ರೇಂಜರ್ ಲೀಡರ್ಸ್‌ಗಳಿಗೆ ರಾಜ್ಯ ಮಟ್ಟದ ಮೂಲ ತರಬೇತಿ ಶಿಬಿರಕ್ಕೆ ಶಿಬಿರಾರ್ಥಿಗಳನ್ನು ನಿಯೋಜಿಸುವ ಕುರಿತು.

* * * *

ಶಿಬಿರದ ವಿವರಗಳು ಈ ಕೆಳಕಂಡಂತಿವೆ :

| | |
|---|---|
| ತರಬೇತಿ ಶಿಬಿರ | ರೇಂಜರ್ ಲೀಡರ್ಸ್‌ಗಳಿಗೆ ರಾಜ್ಯ ಮಟ್ಟದ ಮೂಲ ತರಬೇತಿ ಶಿಬಿರ |
| ಸ್ಥಳ | ಡಾ॥ ವಿ.ಎಸ್. ಆಚಾರ್ಯ ಸ್ಕೌಟ್ಸ್-ಗೈಡ್ಸ್ ಜಿಲ್ಲಾ ತರಬೇತಿ ಕೇಂದ್ರ, ಪ್ರಗತಿನಗರ, ಅಲೆಯೂರು, ಉಡುಪಿ ಜಿಲ್ಲೆ. |
| ದಿನಾಂಕ | 17.08.2018 ರಿಂದ 23.08.2018ರವರೆಗೆ |
| ಹಾಜರಾಗುವ ದಿನಾಂಕ | 17.08.2018 ಬೆಳಗ್ಗೆ 10.00 ಗಂಟೆಯ ಒಳಗೆ |
| ಬಿಡುಗಡೆ ದಿನಾಂಕ | 23.08.2018 ಸಂಜೆ 4 ಗಂಟೆಗೆ |
| ನೊಂದಾವಣಿ ಶುಲ್ಕ | ತಲಾ ರೂ.25/- |
| ದಳ ನೊಂದವಣಿ ಶುಲ್ಕ | ರೇಂಜರ್ ಘಟಕಕ್ಕೆ ವಾರ್ಷಿಕ ರೂ.194/- ಸ್ಕೌಟ್-ಗೈಡ್ ಮಾಸಿಕ ವಾರ್ತಾ ಪತ್ರಿಕೆ ಚಂದದಾರರ ಶುಲ್ಕ ರೂ.100/- ಒಂದು ವರ್ಷಕ್ಕೆ |
| ಯಾರು ಭಾಗವಹಿಸಬಹುದು | ಸರ್ಕಾರಿ ಅರೆಸರ್ಕಾರಿ, ಖಾಸಗಿ, ಪದವಿ ಪೂರ್ವ/ಪ್ರಥಮ ದರ್ಜೆ/ಪಾಲಿಟೆಕ್ನಿಕ್ ಕಾಲೇಜುಗಳ ಮಹಿಳಾ ಉಪನ್ಯಾಸಕಿಯರು – ಕಛೇರಿ ಅಥವಾ ಗ್ರಂಥಾಲಯ ಮಹಿಳಾ ಸಿಬ್ಬಂದಿಗಳು ಮತ್ತು ಜಿಲ್ಲಾ ಸಂಸ್ಥೆಯ ಶಿಫಾರಸ್ಸನ್ನು ಪಡೆದು 21 ವರ್ಷ ತುಂಬಿದ ಮುಕ್ತ ತಂಡದಿಂದ ಮಹಿಳೆಯರು ಭಾಗವಹಿಸಬಹುದು. |
| ಊಟ ಮತ್ತು ವಸತಿ | ರಾಜ್ಯ ಸಂಸ್ಥೆಯು ಏರ್ಪಡಿಸಿದೆ |
| ಸಮವಸ್ತ್ರ | ಕಾಲೇಜುಗಳ ರೋವರ್ ರೇಂಜರ್ ನಿಧಿಯಿಂದ ರೂ.2000/- ಭರಿಸಬಹುದು. ಸಮವಸ್ತ್ರದ ವಿನ್ಯಾಸ ಮತ್ತು ದೊರೆಯುವ ಸ್ಥಳ ಮುಂತಾದ ವಿವರಗಳನ್ನು ನಿಮ್ಮ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಸಂಸ್ಥೆಯ ವತಿಯಿಂದ ಪಡೆಯಲು ಕೋರಿದೆ. ಹೆಚ್ಚಿನ ವಿವರಗಳಿಗೆ ಕಛೇರಿ ದೂರವಾಣಿ ಸಂಖ್ಯೆ :080-22267470 ಗೆ ಸಂಪರ್ಕಿಸಿರಿ. ಶಿಬಿರಕ್ಕೆ ಸಮವಸ್ತ್ರ ಕಡ್ಡಾಯವಾಗಿರಲೇಬೇಕು |

..2

| | |
|---|---|
| ಪ್ರಯಾಣ ವೆಚ್ಚ | ಕಾಲೇಜಿನಿಂದ ಶಿಬಿರ ನಡೆಯುವ ಸ್ಥಳಕ್ಕೆ ಹೋಗಿ ಬರುವ ಪ್ರಯಾಣ ವೆಚ್ಚವನ್ನು ಆಯಾ ಕಾಲೇಜಿನ ರೇಂಜರ್ ನಿಧಿಯಿಂದ ಭರಿಸುವುದು. ಮುಕ್ತ ತಂಡದಿಂದ ಭಾಗವಹಿಸುವ ನಾಯಕರುಗಳು ರಾಜ್ಯ ಸಂಸ್ಥೆಗೆ ಮುಂಚಿತವಾಗಿಯೆ ಜಿಲ್ಲಾ ಸಂಸ್ಥೆಯ ಮುಖಾಂತರ ದಿನಾಂಕ 13.08.2018ರ ಒಳಗೆ ತಿಳಿಸುವುದು. |
| ತರಬೇಕಾದ ವಸ್ತುಗಳು | ಬದಲಾಯಿಸಲು ಉಡುಪು, ಬೆಚ್ಚಗಿನ ಹಾಸಿಗೆ, ತಟ್ಟೆ, ಲೋಟ, 200 ಫೇಜ್‌ನ 2 ನೋಟ್ ಪುಸ್ತಕ, ಡ್ರಾಯಿಂಗ್ ಶೀಟ್, ಸೂಜಿದಾರ, ಸ್ಕೇಚ್ ಪೇನ್ಸ್, ಲೇಖನ ಸಾಮಗ್ರಿಗಳು, ಮೂರು ಮೀಟರ್ ಕಾಟನ್ ಬಿಳಿ ಹಗ್ಗ, ರೈನ್ ಕೋಟ್, ಛತ್ರಿ, ಟಾಚ್, ಕಪ್ಪು ಶೂ, ಕ್ಯಾಮಲ್ ಕಲ್ಲರ್ ಸಾಕ್ಸ್ ಮತ್ತು ಇತರೆ ಶಿಬಿರಕ್ಕೆ ಬೇಕಾಗುವ ಹಾಗೂ ವೈಯಕ್ತಿಕ ವಸ್ತುಗಳು ಮತ್ತು ಔಷಧಿ. |
| ಜಿಲ್ಲೆಗೆ ನಿಗಧಿಪಡಿಸಿರುವ ಕೋಟ | ಎಲ್ಲಾ ಜಿಲ್ಲೆಗಳಿಂದ ಭಾಗವಹಿಸುವುದು. ಭಾಗವಹಿಸುವವರ ಸಂಖ್ಯೆಯನ್ನು ರಾಜ್ಯ/ಜಿಲ್ಲಾ ಸಂಸ್ಥೆ ತಿಳಿಸುವುದು |
| ನೊಂದಾಯಿಸಲು ಕಡೆಯ ದಿನಾಂಕ | 13.08.2018 |
| ಶಿಬಿರವನ್ನು ತಲುಪುವ ವಿಧಾನ | ಮಣಿಪಾಲ್ ಬಸ್ಸು ನಿಲ್ದಾಣ ದಿಂದ ಪ್ರಗತಿನಗರಕ್ಕೆ ಸಿಟಿ ಬಸ್ ಸೌಲಭ್ಯವಿರುತ್ತದೆ ಮತ್ತು ರೈಲಿನಿಂದ ಬರುವವರು ಉಡುಪಿ ರೈಲ್ವೆ ನಿಲ್ದಾಣದಿಂದ ಪ್ರಗತಿನಗರವು 7 ಕಿ.ಮೀ ಇರುತ್ತದೆ. ಅಲ್ಲಿಂದ ಆಟೋದಿಂದ ತರಬೇತಿ ಶಿಬಿರವನ್ನು ತಲುಪುವುದು. |
| ಸಂಪರ್ಕಿಸಬೇಕಾದ ಸಂಖ್ಯೆ | ಶ್ರೀ. ಎ.ಎಂ. ಶಂಕರ್, ರಾಜ್ಯ ತರಬೇತಿ ಆಯುಕ್ತರು(ಸ್ಕೌ): 9972214329<br>ಶ್ರೀಮತಿ. ಕೆ.ವಿ. ಶಾಮಲ, ರಾಜ್ಯ ತರಬೇತಿ ಆಯುಕ್ತರು(ಗೈ):9980237570<br>ಶ್ರೀ. ನಿತಿನ್ ಅಮಿನ್, ಜಿಲ್ಲಾ ಸಂಘಟಕರು :9916817961<br>ಶ್ರೀಮತಿ ಸುಮನ್ ಶೇಖರ್, ಜಿಲ್ಲಾ ಸಂಘಟಕರು :9844994576 |

ಶಿಬಿರ ನೊಂದಣಿ ಶುಲ್ಕ, ದಳ ನೋಂದಣಿ ಶುಲ್ಕ ಮತ್ತು ಸ್ಕೌಟ್ ಗೈಡ್ ಮಾಸ ಪತ್ರಿಕೆ ವಾರ್ಷಿಕ ಚಂದಾಹಣವನ್ನು ಆಯಾ ಕಾಲೇಜಿನ ರೋವರ್ ಮತ್ತು ರೇಂಜರ್ ನಿಧಿಯಿಂದ, ಸರ್ಕಾರಿ ಆದೇಶದಂತೆ ಭರಿಸಲು ಅವಕಾಶವಿರುತ್ತದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

ಚಿನ್ನಸ್ವಾಮಿ ರೆಡ್ಡಿ
ರಾಜ್ಯ ಕಾರ್ಯದರ್ಶಿ